ಆ) ಕಳೆದ ಮೂರು ವರ್ಷಗಳಲ್ಲಿ ಗುತ್ತಿಗೆದಾರರಿಗೆ ಪಾವತಿಸಿರುವ ಮೊತ್ತ ಈ ಕೆಳಕಂಡಂತೆ ಇರುತ್ತದೆ.

2009–10 – ರೂ. 210852.37 ಲಕ್ಷಗಳು

2010–11 – ರೂ. 275553.62 ಲಕ್ಷಗಳು

2011–12 – ರೂ. 353906.07 ಲಕ್ಷಗಳು

ಪ್ರಸ್ತುತ ಪಾವತಿಸಬೇಕಾಗಿರುವ ಒಟ್ಟಾರೆ ಬಾಕಿ ಮೊತ್ತ ರೂ. 161430.23 ಲಕ್ಷಗಳು.

ಇ) ಕಳೆದ ಮೂರು ವರ್ಷಗಳಲ್ಲಿ ರಸ್ತೆ ಕಾಮಗಾರಿಗಳಿಗೆ ವೆಚ್ಚ ಭರಿಸಿರುವ ಮೊತ್ತಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

2009–10 – ರೂ.30228.91 ಲಕ್ಷಗಳು

2010–11 – ರೂ.62761.55 ಲಕ್ಷಗಳು

2011–12 – ರೂ.61928.38 ಲಕ್ಷಗಳು

ಈ) ನಗರ ಪರಿಮಿತಿಯಲ್ಲಿ ರಾಜ್ಯ ಹೆದ್ದಾರಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಐಆರ್‌ಸಿ ಅನುಗುಣವಾಗಿ ಪಾದಚಾರಿಗಳಿಗೆ ಅನುಕೂಲವಾಗುವಂತೆ ಪಾದಚಾರಿ ರಸ್ತೆಯನ್ನು ನಿರ್ಮಿಸಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇರುವ ಬಿಲ್ಲುಗಳು

519 (624) ಶ್ರೀ ಶಿವಲಿಂಗೇಗೌಡ. ಕೆ.ಎಂ. (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಎಲ್ಲಾ ಲೆಕ್ಕ ಶೀರ್ಷಿಕೆಗಳಿಂದ ಇಲ್ಲಿಯವರೆವಿಗೂ ಬಾಕಿ ಇರುವ ಮೊತ್ತವೆಷ್ಟು;

ಆ) ಬಾಕಿ ಇರುವ ಬಿಲ್ಲುಗಳನ್ನು ಪಾವತಿಸಲು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಾವಳಿಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಎಲ್ಲಾ ಲೆಕ್ಕಶೀರ್ಷಿಕೆಗಳಿಂದ ಇಲ್ಲಿಯವರೆವಿಗೂ ಬಾಕಿ ಇರುವ ಮೊತ್ತ ರೂ.155763.88 ಲಕ್ಷಗಳು.

ಆ) ವಲಯಗಳ ಮುಖ್ಯ ಅಭಿಯಂತರುಗಳಿಗೆ ಅನುದಾನ ಬಿಡುಗಡೆ ಮಾಡುವಾಗ ಆರ್ಥಿಕ ಇಲಾಖೆ: ಲೋಕೋಪಯೋಗಿ ಇಲಾಖೆಯಿಂದ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಬಿಕಿ ಇರುವ ಬಿಲ್ಲುಗಳನ್ನು ಈ ಕೆಳಕಂಡಂತೆ ಜೇಷ್ಠತೆಯನ್ನು ಆದರಿಸಿ ಪಾವತಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಅ. ಬಿಡುಗಡೆಯಾದ ಅನುದಾನದಲ್ಲಿ ಶೇ.80% ಅನುದಾನವನ್ನು ಕಟ್ಟುನಿಟ್ಟಾಗಿ ಬಾಕಿಬಿಲ್ಲುಗಳ ಜೇಷ್ಠತೆಯನ್ನು ಆಧರಿಸಿ ಪಾವತಿಸುವುದು.

ಆ. ಬಿಡುಗಡೆಯಾದ ಅನುದಾನದಲ್ಲಿ ಶೇ.20% ರಷ್ಟು ಅನುದಾನವನ್ನು

1. ಅನುದಾನದಲ್ಲಿ ನಿಗದಿತ ಸಮಯದೊಳಗೆ ಮುಕ್ತಾಯ ಗೊಳಿಸುವ ಯೋಜನೆಗಳ ಕಾಮಗಾರಿಗಳಿಗೆ ಪಾವತಿಸಲು;
2. ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದ ಸರ್ಕಾರದ ಅಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಾಗೂ ನ್ಯಾಯಾಂಗ ನಿಂದನೆಗೆ ಸಂಬಂಧಿಸಿದ ನ್ಯಾಯಾಂಗ ಆದೇಶಗಳ ಪಾವತಿಗಾಗಿ;
3. ನಾಲಾ/ಕೆರೆ ಹೊಡೆಯುವುದು, ಕಟ್ಟಡಗಳು ಮತ್ತು ಸೇತುವೆಗಳ ಕುಸಿಯುವಿಕೆ ಮುಂತಾದ ಅನಿರೀಕ್ಷಿತ ಘಟನೆ ಗಳಿಗೆ ಮತ್ತು ಪ್ರಕೃತಿವಿಕೋಪ ತುರ್ತು ಸಂದರ್ಭಗಳಲ್ಲಿ ತೆಗೆದುಕೊಳ್ಳಲಾಗುವ ಕಾಮಗಾರಿಗಳಿಗೆ ಪಾವತಿಸಲು ಸೂಚನೆ ನೀಡಲಾಗಿದೆ.

ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳ ಮಂಜೂರಾತಿ

428 (767) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದ ಗೋಳ) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ಎರಡು ವರ್ಷಗಳಿಂದ ಮತ್ಸ್ಯಾಶ್ರಯ ಯೋಜನೆಯಡಿ ಮೀನುಗಾರರಿಗೆ ಮನೆಗಳನ್ನು ಹಂಚಿಕೆ ಮಾಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;